KARC210007732025

Presented on : 08.06.2025
Registered on : 08.06.2025
Decided on : 03-07-2026
Duration : 01 years, 00 months, 25 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ದೇವದುರ್ಗ.**

**ಉಪಸ್ಥಿತರು ಃ ಶ್ರೀ** ರಫೀಕ್ ಅಹಮದ್., ಬಿಎ., **ಎಲ್.ಎಲ್.ಬಿ.,**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಕಾರಿಗಳು,**
ದೇವದುರ್ಗ.

**ಸಿ.ಸಿ.ನಂ ಃ 1027/2025**

**ದಿನಾಂಕ 03** ನೇ ಜುಲೈ **2026.**

**ಪಿರ್ಯಾದಿದಾರರು** ಃ ರಾಜ್ಯ ಸರ್ಕಾರದ ಪರವಾಗಿ,
ಠಾಣಾ ಅಮಲ್ದಾರರು
ದೇವದುರ್ಗ. ಪೊಲೀಸ್ ಠಾಣೆ, ದೇವದುರ್ಗ.
(ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು ಃ
1. ರುದ್ರಪ್ಪ ತಂದೆ ಲಕ್ಷ್ಮಣ್ಣ,70 ವರ್ಷ, ಉಃ ಒಕ್ಕಲುತನ,
2. ಗೂಳಪ್ಪ ತಂದೆ ರುದ್ರಪ್ಪ, 32 ವರ್ಷ, ಉಃ ಒಕ್ಕಲುತನ,
3. ನಾಗಪ್ಪ ತಂದೆ ರುದ್ರಪ್ಪ, 28 ವರ್ಷ, ಉಃ ಒಕ್ಕಲುತನ,
4. ದೇವಪ್ಪ ತಂದೆ ಮಲ್ಲಯ್ಯ, 28 ವರ್ಷ, ಉಃ ಒಕ್ಕಲುತನ,

ಎಲ್ಲರ ವಾಸಃ ಹೂವಿನಹೆಡಗಿ ಗ್ರಾಮ, ತಾಃ ದೇವದುರ್ಗ,
ಜಿಃ ರಾಯಚೂರು.

(ಶ್ರೀ ವಿ.ಎಮ್.ಎಮ್., **ವಕೀಲರು**)

| | | |
|---|---|---|
| **ಅಪರಾಧವು ಘಟಿಸಿದ ದಿನಾಂಕ** | ಃ | 08.06.2025 |
| ಆರೋಪಿತರು **ಹಾಜರಾತಿಯ ದಿನಾಂಕ** | ಃ | 04-11-2025 |
| **ಫಿರ್ಯಾದುದಾರರ ಹೆಸರು** | ಃ | ಬಸಲಿಂಗಮ್ಮ |
| **ಸಾಕ್ಷಿ ವಿಚಾರಣೆಯನ್ನು ಪ್ರಾರಂಭಿಸಿದ ದಿನಾಂಕ** | ಃ | 17-06-2026 |
| **ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿದ ದಿನಾಂಕ** | ಃ | 17-06-2026 |

| | |
|---|---|
| ಆರೋಪಿತರು **ವಿರುದ್ಧ ಹೊರಿಸಿದ ಆರೋಪಗಳು** | ಃ ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5). |
| **ನ್ಯಾಯಾಲಯದ ತೀರ್ಮಾನ** | ಃ ಆರೋಪಿತರು ಬಿಡುಗಡೆಗೊಂಡಿತ್ತಾರೆ. |
| ಪಿರ್ಯಾದಿ ಪರ ಪ್ರತಿನಿಧಿಸಿದವರು | ಃ ಸರ್ಕಾರಿ ಅಭಿಯೋಜಕರು |
| ಆರೋಪಿತರು ಪರ ಪ್ರತಿನಿಧಿಸಿದವರು | ಃ ಶ್ರೀ ವಿ.ಎಮ್.ಎಮ್., ವಕೀಲರು. |

***ಃಃ ತೀರ್ಪು ಃಃ***

ಠಾಣಾಧಿಕಾರಿಗಳು ದೇವದುರ್ಗ, ಪೊಲೀಸ್ ಠಾಣೆ, ದೇವದುರ್ಗ. ಇವರು ಆರೋಪಿತರು ವಿರುದ್ಧ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5) ರೀತ್ಯಾ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ-**

ದಿನಾಂಕ 08.06.2025 ರಂದು ಮದ್ಯಾಹ್ನ 3.30 ಗಂಟೆಯ ಸುಮಾರಿಗೆ ಹೂವಿನ ಹೆಡಗಿ ಗ್ರಾಮದ ವ್ಯಾಪ್ತಿಯಲ್ಲಿರುವ ಫಿರ್ಯಾದಿಯ ಹೋಲದ ರಸ್ತೆಯ ಹತ್ತಿರ ಫಿರ್ಯಾದಿ ಮತ್ತು ಫಿರ್ಯಾದಿಯ ಮಗಳು ಸಾಕ್ಷಿ ನಂ.4 ಸೇರಿ ತಮ್ಮ ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ನಂ.1 ರಿಂದ 4 ರವರು ಸಾಕ್ಷಿ ನಂ.1 ರವರ ಹೊಲಕ್ಕೆ ಬಂದು ಅವರಿಗೆ ಲೇ ಸೂಳೇ ಇದೇನು ನಿನ್ನ ಮಿಂಡಗಾರನ ಹೊಲ ಏನ್. ಈ ಹೊಲ ನಮ್ಮದು ಬಿಟ್ಟು ಹೋಗು ಇಲ್ಲದಿದ್ದರೆ ಖಲಾಸ್ ಮಾಡುತ್ತೇವೆ ಅಂತಾ ಅಚಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿದಾಗ ಫಿರ್ಯಾದಿದಾರಳು ಇದು ನಮ್ಮ ಹೊಲ ನಾವೇಕೆ ಹೊಲ ಬಿಟ್ಟು ಕೊಡಬೇಕು ಅಂತಾ ಅಂದಿದಕ್ಕೆ ಎಲ್ಲರೂ ಒಮ್ಮೆಲೆ ಸಿಟ್ಟಿಗೆ ಬಂದು ಆರೋಪಿ ನಂ.2 ಈತನು ಅಲ್ಲಿಯೇ ಇದೆ ಕಲಿನಿಂದ ಫಿರ್ಯಾದಿಯ ತಲೆಗೆ ಮತ್ತು ಎಡಗೈಗೆ ಹೊಡೆದಿದ್ದು, ನಂತರ ಫಿರ್ಯಾದಿದಾರಳು ಅಲ್ಲಿಂದ ತಪ್ಪಿಸಿಕೊಂಡು ಮನೆಗೆ ಹೊಗಬೇಕೆಂದು ಸಾಕ್ಷಿ ನಂ.4 ರವರೊಂದಿಗೆ ರೋಡಿಗೆ ಬಂದಾಗ ಆರೋಪಿ ನಂ.1 ಸಾಕ್ಷಿ ನಂ.1 ನೇದ್ದವರ ಸೀರೆಯನ್ನು ಹಿಡಿದು ಎಳೆದು ಫಿರ್ಯಾದಿಗೆ ಅವಮಾನ ಮಾಡಿದ್ದು, ಆರೋಪಿ ನಂ.3 ಈತನು ಸಾಕ್ಷಿ ನಂ.1 ನೇದ್ದವರಿಗೆ ಕೈಯಿಂದ ಹೊಡೆ ಬಡೆ ಮಾಡಿ ಈ ಸೋಳೆದು ಏನ ಕೇಳುತ್ತಿರಿ ಖಲಾಸ್ ಮಾಡ್ರಿ ಅಂತಾ ಅಂದಾಗ ಆರೋಪಿ ನಂ.4 ದೇವಪ್ಪ ಈತನು ಈ ಸೂಳೆದು ಜಾಸ್ತಿಯಾಗಿದೆ ಇವತ್ತು ಕೊಲೆ ಮಾಡಿ ಬಿಡೋಣ ಅಂತಾ ಅಂದವನೇ ಬಲಗೈ ಜೋರಾಗಿ ತರಿಚಿದ್ದು ಅಲ್ಲದೆ

ಕಾಲಿನಿಂದ ಜೋರಾಗಿ ಹೊಟ್ಟೆಗೆ ಎದೆಗೆ, ಒದಿದ್ದು, ನಂತರ ಎಲ್ಲರೂ ಸೇರಿ ಸೂಳೆ ಇವತ್ತು ಉಳಿದಿಕೊಂಡಿದ್ದಿಯಾ ಇನ್ನೊಮ್ಮೆ ಏನಾದರೂ ಹೇಳಿದಷ್ಟು ಕೇಳಿಲಿಲ್ಲ ಅಂದ್ರೆ ಕೊಲೆ ಮಾಡಿ ಬಿಡುತ್ತೇವೆ ಅಂತಾ ಎಲ್ಲರೂ ಸೇರಿ ಜೀವದ ಬೆದರಿಕೆ ಹಾಕಿ, ಅಲ್ಲಿಯೇ ಇದ್ದ ಸಾಕ್ಷಿ ನಂ.4 ಮತ್ತು ಜಗಳ ಮಾಡುವ ವಿಷಯ ತಿಳಿದು ಸಾಕ್ಷಿ ನಂ.5 ರವರು ಜಗಳ ಬಿಡಿಸಿಕೊಂಡಿದ್ದು, ಆದ್ದರಿಂದ ಚಾಸಾ-1 ರವರು ಲಿಖಿತ ದೂರನ್ನು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ದೇವದುರ್ಗ ಪೊಲೀಸರು ತಮ್ಮ ಠಾಣಾ ಮೊ.ನಂ.180/2025 ರಲ್ಲಿ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5) ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾಧಿಕಾರಿಯು ತನಿಖೆ ಪೂರೈಸಿ ಆರೋಪಿತರ ವಿರುದ್ದ ಮೇಲ್ಕಂಡ ಕಲಂ ಗಳ ಅನ್ವಯ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಸಲ್ಲಿಸಿರುವ ದೋಷಾರೋಪಣ ಪತ್ರ ಮತ್ತು ಅಭಿಯೋಜನೆಯ ದಾಖಲೆಗಳನ್ನು ಪರಿಶೀಲಿಸಿ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5) ರಡಿಯಲ್ಲಿ ಎಸಗಿದ ಅಪರಾಧಗಳಿಗೆ ಸಂಜ್ಞೇಯತೆ ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಸಮನ್ಸ್ ನ ಅನ್ವಯ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಬಿ.ಎನ್.ಎಸ್.ಎಸ್ ಕಲಂ 230 ರಡಿಯಲ್ಲಿ ಆರೋಪಿತರಿಗೆ ಅಭಿಯೋಜನೆಯ ಕಾಗದ ಪತ್ರಗಳನ್ನು ನೀಡಲಾಯಿತು. ಆರೋಪಿತರಿಗೆ ಅವರ ಮೇಲಿನ ದೋಷಾರೋಪಣೆಗಳನ್ನು ರಚಿಸಿ ಓದಿ ಹೇಳಲಾಯಿತು. ಆರೋಪಿತರು ತಾವು ಏನು ತಪ್ಪು ಮಾಡಿಲ್ಲವೆಂದು ಹಾಗೂ ಪ್ರತಿರಕ್ಷೆ ಇದೆ ಎಂದು ಹೇಳಿ ವಿಚಾರಣೆ ಬಯಸಿರುತ್ತಾರೆ. ಆದ್ದರಿಂದ ಅಭಿಯೋಜನೆಗೆ ಆರೋಪಿತರ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಅವಕಾಶ ನೀಡಲಾಯಿತು.

**4.** ಈ ಪ್ರಕರಣದಲ್ಲಿ ಆರೋಪಿತರ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಪಿರ್ಯಾದಿ ಹಾಗೂ ಗಾಯಳು ಸಾಕ್ಷಿದಾರರಾದ ಚಾಸಾ-1 ಬಸಲಿಂಗಮ್ಮ ರವರನ್ನು ಪ್ರಾಸಾ-1 ಎಂದು, ಪಂಚ ಸಾಕ್ಷಿದಾರರಾದ ಚಾಸಾ-5 ಲಕ್ಷ್ಮಣ ರವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿ

ಹಾಗೂ ನಿಪಿ-1 ರಿಂದ ನಿಪಿ.5 ರಂತಿರುವ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಪಿರ್ಯಾದಿ ಹಾಗೂ ಗಾಯಳು ಸಾಕ್ಷಿದಾರರಾದ ಚಾಸಾ-1 ಬಸಲಿಂಗಮ್ಮ ರವರನ್ನು ಪ್ರಾಸಾ-1 ಎಂದು, ಪಂಚ ಸಾಕ್ಷಿದಾರರಾದ ಚಾಸಾ-5 ಲಕ್ಷ್ಮಣ ರವರನ್ನು ಪ್ರಾಸಾ-2 ಎಂದು ವಿಚಾರಣೆ ಮಾಡಲಾಗಿದ್ದು. ಸದರಿಯವರು ಆರೋಪಿತರ ವಿರುದ್ದ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಆರೋಪಿತರ ವಿರುದ್ದ ಹೊರಿಸಿದ ಆರೋಪಗಳನ್ನು ರುಜುವಾತುಪಡಿಸುವ ಯಾವುದೇ ಉದ್ದೇಶ ಈಡೇರುವ ಸಂಭವ ಇಲ್ಲದೇ ಇದ್ದ ಕಾರಣ ಇತರೆ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಅವಕಾಶ ಕಲ್ಪಿಸಕೊಡಬೇಕೆಂದು ಅಭಿಯೋಜನೆಯು ಮಾಡಿದ ಮನವಿಯನ್ನು ತಿರಸ್ಕರಿಸಲಾಯಿತು.

**5.** ಆರೋಪಿತರ ವಿರುದ್ದ ಅಭಿಯೋಜನೆಯು ಸಾಕ್ಷಿದಾರರು ತಮ್ಮ ಸಾಕ್ಷ ವಿಚಾರಣೆಯಲ್ಲಿ ಆರೋಪವನ್ನು ರುಜುವಾತು ಪಡಿಸುವ ಸಾಕ್ಷ ನುಡಿಯದೆ ಇದ್ದುದರಿಂದ ಬಿ.ಎನ್.ಎಸ್.ಎಸ್ ಕಲಂ 351 ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಯಿತು.

**6.** ಉಭಯ ಪಕ್ಷಗಳ ವಾದ ವಿವಾದಗಳನ್ನು ಕೇಳಲಾಗಿ ನನ್ನ ವಿವೇಚನೆಗೆ ಈ ಕೆಳಕಂಡಂತೆ ಅಂಶಗಳು ಉದ್ಭವಿಸುತ್ತವೆ.

**// ಅಂಶಗಳು //**

**ಅಂಶ ನಂ.1** :- ದಿನಾಂಕ 08.06.2025 ರಂದು ಮದ್ಯಾಹ್ನ 3.30 ಗಂಟೆಯ ಸುಮಾರಿಗೆ ಹೂವಿನಹೆಡಗಿ ಗ್ರಾಮದ ವ್ಯಾಪ್ತಿಯಲ್ಲಿರುವ ಫಿರ್ಯಾದಿಯ ಹೋಲದ ರಸ್ತೆಯ ಹತ್ತಿರ ಫಿರ್ಯಾದಿ ಮತ್ತು ಫಿರ್ಯಾದಿಯ ಮಗಳು ಸಾಕ್ಷಿ ನಂ.4 ಸೇರಿ ತಮ್ಮ ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿತರು ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ಆರೋಪಿ ನಂಬರ್-3 ಇತನು ಸಾಕ್ಷಿ ನಂಬರ್-1 ರವರಿಗೆ ಕೈಯಿಂದ ಹೊಡೆ ಬಡೆ ಮಾಡಿದ್ದು, 4 ನೇ ಆರೋಪಿತನು ಸಾಕ್ಷಿ ನಂಬರ್-1 ರವರ ಬಲಗೈಗೆ ಜೋರಾಗಿ ಚುರಿದ್ದು ಅಲ್ಲದೆ ಕಾಲಿನಿಂದ ಜೋರಾಗಿ ಹೊಟ್ಟೆಗೆ ಎದೆಗೆ ಒದಿದ್ದು, ಅಲ್ಲಿಯೇ ಇದ್ದ ಸಾಕ್ಷಿ ನಂ. 4 ಮತ್ತು ಜಗಳ ಮಾಡುವ ವಿಷಯ ತಿಳಿದು ಸಾಕ್ಷಿ 5 ರವರು ಜಗಳ ಬಿಡಿಸಿಕೊಂಡಿರುತ್ತಾರೆ. ಆ ಮೂಲಕ ನಿಮ್ಮ ಮೇಲೆ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹವಾಚಕ ಕಲಂ 3(5) ರಡಿಯಲ್ಲಿ

ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ?

**ಅಂಶ ನಂ.2 ಃ-** ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು, 2 ನೇ ಆರೋಪಿತನು ಅಲ್ಲಿಯೇ ಇದ್ದ ಕಲ್ಲಿನಿಂದ ಫಿರ್ಯಾದಿಯ ತಲೆಗೆ ಮತ್ತು ಎಡಗೈಗೆ ಹೊಡೆದಿದ್ದು. ಆ ಮೂಲಕ ನಿಮ್ಮ ಮೇಲೆ ಭಾರತೀಯ ನ್ಯಾಯಾ ಸಂಹಿತೆ ಕಲಂ 118(1) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ ?

**ಅಂಶ ನಂ.3 ಃ-** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯಕ್ಕೆ, ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು, ಆರೋಪಿ ನಂ.1 ಸಾಕ್ಷಿ ನಂಬರ್ 1 ನೇದ್ದವರ ಸೀರೆಯನ್ನು ಹಿಡಿದು ಎಳೆದು ಫಿರ್ಯಾದಿಯವರ ಮಾನಕ್ಕೆ ಕುಂದುಂಟು ಮಾಡುವ ರೀತಿಯಲ್ಲಿ ವರ್ತನೆ ಮಾಡಿದ್ದು. ಆ ಮೂಲಕ ನಿಮ್ಮ ಮೇಲೆ ಭಾರತೀಯ ನ್ಯಾಯಾ ಸಂಹಿತೆ ಕಲಂ 74 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ ?

**ಅಂಶ ನಂ.4 ಃ-** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯಕ್ಕೆ, ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು, ಆರೋಪಿ ನಂ.1 ರಿಂದ 4 ರವರು ನಮ್ಮ ಹೊಲಕ್ಕೆ ಬಂದು ಫಿರ್ಯಾದಿದಾರಳಿಗೆ ಈ ಹೊಲ ನಮ್ಮದು ಬಿಟ್ಟು ಹೋಗು ಇಲ್ಲದಿದ್ದರೆ ಖಲಾಸ್ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದಾಗ ಫಿರ್ಯಾದಿದಾರಳು ಇದು ನಮ್ಮ ಹೊಲ ನಾವೇಕೆ ಹೊಲ ಬಿಟ್ಟು ಕೊಡಬೇಕು ಅಂತಾ ಅಂದಿದಕ್ಕೆ ಎಲ್ಲರೂ ಒಮ್ಮೆಲೆ ಸಿಟ್ಟಿಗೆ ಬಂದು ಈ ಸೋಳೆದು ಏನ ಕೇಳುತ್ತಿರಿ ಖಲಾಸ್ ಮಾಡ್ರಿ ಅಂತಾ ಅಂದಾಗ ಆರೋಪಿ ನಂ.4 ದೇವಪ್ಪ ಈತನು ಈ ಸೂಳೆದು ಜಾಸ್ತಿಯಾಗಿದೆ ಇವತ್ತು ಕೊಲೆ ಮಾಡಿ ಬಿಡೋಣ ಅಂತಾ ಅಂದವನೇ ಎಲ್ಲರೂ ಸೇರಿ

ಸೂಳೆ ಇವತ್ತು ಉಳಿದಿಕೊಂಡಿದ್ದಿಯಾ ಇನ್ನೊಮ್ಮೆ ಏನಾದರೂ ಹೇಳಿದಷ್ಟು ಕೇಳಿಲಿಲ್ಲ ಅಂದ್ರೆ ಕೊಲೆ ಮಾಡಿ ಬಿಡುತ್ತೇವೆ ಅಂತಾ ಎಲ್ಲರೂ ಸೇರಿ ಜೀವದ ಬೆದರಿಕೆ ಹಾಕಿದ್ದು. ಆ ಮೂಲಕ ನಿಮ್ಮ ಮೇಲೆ ಭಾರತೀಯ ನ್ಯಾಯಾ ಸಂಹಿತೆ ಕಲಂ 351(2) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ ?

**ಅಂಶ ನಂ.5 ಃ-** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯಕ್ಕೆ, ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು, ಆರೋಪಿ ನಂ.1 ರಿಂದ 4 ರವರು ಫಿರ್ಯಾದಿದಾರಳಿಗೆ ಹೊಲಕ್ಕೆ ಬಂದು ಲೇ ಸೂಳೇ ಇದೇನು ನಿನ್ನ ಮಿಂಡಗಾರನ ಹೊಲ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು. ಆ ಮೂಲಕ ನಿಮ್ಮ ಮೇಲೆ ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ ?

**ಅಂಶ ನಂ.6 ಃ-** ಯಾವ ಆದೇಶ **?**

**7.** ಮೇಲ್ಕಂಡ ಅಂಶಗಳನ್ನು ನಾನು ಈ ಕೆಳಕಂಡಂತೆ ಕಾಣಿಸಿರುವ ಕಾರಣಗಳಿಗಾಗಿ ಈ ರೀತಿ ಉತ್ತರಿಸುತ್ತೇನೆ.

**ಅಂಶ 1 ರಿಂದ 5 ಃ-** ನಕಾರಾತ್ಮಕವಾಗಿ

**ಅಂಶ 6 ಃ-** ಅಂತಿಮ ಆದೇಶದ ಪ್ರಕಾರ ಈ ಕೆಳಕಂಡ

**// ಕಾರಣಗಳು //**

**8. ಅಂಶ ನಂ.1 ರಿಂದ 5 ಃ-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಸಾಕ್ಷ್ಯ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸಲು ಎಲ್ಲಾ ಅಂಶಗಳನ್ನು ಏಕ ಕಾಲದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಿದಂತಹ ಆರೋಪಗಳನ್ನು ರುಜುವಾತು ಪಡಿಸಲು ಈ ಪ್ರಕರಣದ ಪಿರ್ಯಾದಿ ಹಾಗೂ ಗಾಯಳು ಸಾಕ್ಷಿದಾರರಾದ ಚಾಸಾ-1

ಬಸಲಿಂಗಮ್ಮ ರವರನ್ನು ಪ್ರಾಸಾ-1 ಎಂದು, ಪಂಚ ಸಾಕ್ಷಿದಾರರಾದ ಚಾಸಾ-5 ಲಕ್ಷ್ಮಣ ರವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿರುತ್ತದೆ. ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿ ಅಭಿಯೋಜನೆಯು ನಿ.ಪಿ-1 ದೂರು, ನಿ.ಪಿ-2 ಪಂಚನಾಮೆ, ನಿ.ಪಿ-3 ಛಾಯಚಿತ್ರ, ನಿ.ಪಿ-4 ಮತ್ತು 5 ಸಾಕ್ಷಿ ಅಲ್ಲೆಗೇಳೇದ ಹೇಳಿಕೆಗಳನ್ನು ಗುರುತಿಸಿಕೊಂಡಿರುತ್ತಾರೆ.

**9.** ಪ್ರಾಸಾ-1 ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-5 ತನ್ನ ಗಂಡ, ಚಾಸಾ-4 ತನ್ನ ಮಗಳು, ಚಾಸಾ-2 ಮತ್ತು 3 ರವರು ಪರಿಚಯ ಇದ್ದು. 1 ನೇ ಆರೋಪಿ ತನ್ನ ಮಾವ, 2 ಮತ್ತು 3 ನೇ ಆರೋಪಿತರು ತನ್ನ ಮೈದುನರಾಗಿದ್ದು. 4 ನೇ ಆರೋಪಿ ತನ್ನ ನಾದಿನಿಯ ಮಗನಾಗಿದ್ದು. ಆರೋಪಿತರು ತನಗೆ ಮತ್ತು ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿಲ್ಲ, ಆರೋಪಿತರು ಅಕ್ರಮಕೂಟ ರಚಿಸಿಕೊಂಡು ಬಂದಿಲ್ಲ, ಕೈಯಲ್ಲಿ ಮಾರಾಕಾಸ್ತ್ರಗಳನ್ನು ತೆಗೆದುಕೊಂಡು ಬಂದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ತನ್ನ ಮಾನಕ್ಕೆ ಕುಂದುಂಟು ಮಾಡುವ ರೀತಿಯಲ್ಲಿ ವರ್ತನೆ ಮಾಡಿಲ್ಲ. ನಿ.ಪಿ-1 ರಲ್ಲಿ ಬರೆದ ವಿಷಯ ತನಗೆ ಗೊತ್ತಿಲ್ಲ. ದೂರು ಕೊಟ್ಟ ನಂತರ ಪೋಲಿಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ, ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು. ಆ ಸಮಯದಲ್ಲಿ ತೆಗೆಸಿದ ಛಾಯಾ ಚಿತ್ರವನ್ನು ನಿ.ಪಿ-3 ಎಂದು ಗುರುತಿಸಲಾಯಿತು. ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಮಾಡಿಕೊಂಡಿಲ್ಲ. ಈ ಪ್ರಕರಣದ ಬಗ್ಗೆ ತನಗೇನು ಗೊತ್ತಿರುವುದಿಲ್ಲ. ತಾನು ಪೋಲಿಸರಿಗೆ ಪುರವಣಿ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರ ಹೇಳಿಕೆಯನ್ನು ನಿ.ಪಿ-4 ಎಂದು ಗುರುತಿಸಲಾಯಿತ್ತು.

**10.** ಪ್ರಾಸಾ-2 ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ತನ್ನ ಹೆಂಡತಿ, ಚಾಸಾ-4 ತನ್ನ ಮಗಳು, ಚಾಸಾ-2 ಮತ್ತು 3 ರವರು ಪರಿಚಯ ಇದ್ದು. 1 ನೇ ಆರೋಪಿ ತನ್ನ ತಂದೆ, 2 ಮತ್ತು 3 ನೇ ಆರೋಪಿತರು ತನ್ನ ಸಹೋದರರು. 4 ನೇ ಆರೋಪಿ ತನ್ನ ಅಳಿಯ. ಆರೋಪಿತರು ತನಗೆ ಮತ್ತು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿಲ್ಲ, ಆರೋಪಿತರು ಅಕ್ರಮಕೂಟ ರಚಿಸಿಕೊಂಡು ಬಂದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಕೈಯಲ್ಲಿ ಮಾರಾಕಾಸ್ತ್ರಗಳನ್ನು ತೆಗೆದುಕೊಂಡು ಬಂದಿಲ್ಲ, ಆರೋಪಿತರು ಚಾಸಾ-1 ರವರ ಮಾನಕ್ಕೆ

ಕುಂದುಂಟು ಮಾಡುವ ರೀತಿಯಲ್ಲಿ ವರ್ತನೆ ಮಾಡಿಲ್ಲ, ಈ ಪ್ರಕರಣದ ಬಗ್ಗೆ ತನಗೇನು ಗೊತ್ತಿರುವುದಿಲ್ಲ. ತಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರ ಹೇಳಿಕೆಯನ್ನು ನಿ.ಪಿ-5 ಎಂದು ಗುರುತಿಸಲಾಯಿತ್ತು.

**11.** ಮಾನ್ಯ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಪ್ರಾಸಾ.1 ಮತ್ತು 2 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದಾಗಿಯೂ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ರುಜುವಾತು ಪಡಿಸುವ ಯಾವುದೇ ಅಂಶಗಳನ್ನು ಹೊರ ತಂದಿರುವುದಿಲ್ಲ. ಆದ್ದರಿಂದ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ರುಜುವಾತುಪಡಿಸಲು ಯಾವುದೇ ರೀತಿಯಿಂದ ಉಪಯುಕ್ತವಾಗಿರುವುದಿಲ್ಲ.

**12.** ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಹೊರಿಸಿದ್ದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಸರ್ಕಾರಿ ಅಭಿಯೋಜಕರು ವಿಚಾರಿಸಿದಂತಹ ಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರು ಈ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಆರೋಪಿತರ ವಿರುದ್ಧ ಹೊರಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಅಲ್ಲದೇ ಸದರಿ ಪ್ರಾಸಾ-1 ಮತ್ತು 2 ರವರ ಸಾಕ್ಷ ವಿಚಾರಣೆಯನ್ನು ಗಮನಿಸಿದಾಗ ದೂರುದಾರರು, ಸಾಕ್ಷಿದಾರರು ಮತ್ತು ಆರೋಪಿತರು ಪ್ರಕರಣವನ್ನು ರಾಜಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಆದ್ದರಿಂದ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5) ರಡಿಯಲ್ಲಿ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆಂದು ನಾನು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ ಮೇಲ್ಕಂಡ ಅಂಶಗಳನ್ನು ನಾನು ನಕರಾತ್ಮಕವಾಗಿ ಉತ್ತರಿಸುತ್ತೇನೆ.

**13. ಅಂಶ ನಂ.6ಃ-** ಮೇಲ್ಕಂಡ ಅಂಶಗಳ ಮೇಲೆ ಈ ನ್ಯಾಯಾಲಯವು ಮಾಡಿರುವ ನಿರ್ಣಯದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶವನ್ನು ಮಾಡಿರುತ್ತದೆ.

**ಃ ಆದೇಶ ಃ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ಮತ್ತು ಬಿ.ಎನ್.ಎಸ್.ಎಸ್ ಕಲಂ 271(1) ರಡಿಯಲ್ಲಿ ಈ ನ್ಯಾಯಾಲಯಕ್ಕೆ ಇರುವ ಪ್ರದತ್ತವಾದ ಅಧಿಕಾರದ ಅನ್ವಯ ಆರೋಪಿತರು ಭಾರತೀಯ ನ್ಯಾಯಾ ಸಂಹಿತೆ ಕಲಂ 115(2), 118(1), 74, 351(2), 352 ಸಹವಾಚಕ ಕಲಂ 3(5) ರ ಅಪರಾದಕ್ಕೆ ನಿರ್ದೋಷಿಗಳೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರ ಮುಚ್ಚಳಿಕೆಯನ್ನು ಈ ಮೂಲಕ ರದ್ದುಗೊಳಿಸಿದೆ.

ಆರೋಪಿತರ ಮತ್ತು ಜಾಮೀನುದಾರರು ಬಿ.ಎನ್.ಎಸ್.ಎಸ್ ಕಲಂ 481 ರಡಿಯಲ್ಲಿ ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು 6 ತಿಂಗಳ ಕಾಲ ಅಸ್ತಿತ್ವದಲ್ಲಿರುತ್ತದೆ.

ದೋಷಾರೋಪಣಾ ಪತ್ರದೊಂದಿಗೆ ಸ್ವತ್ತು ಪಟ್ಟಿ ಸಂಖ್ಯೆ 159/2025 ರಲ್ಲಿ ದಿಃ 10-06-2025 ರಲ್ಲಿ ನಮೂದಿಸಿರುವ ಒಂದು ಹಿಡಿ ಗಾತ್ರದ ಕಲ್ಲು ಮೌಲ್ಯ ರಹಿತವಾಗಿರುವುದರಿಂದ ಇವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

**(ಈ ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ಉಕ್ತಲೇಖನ ಕೊಟ್ಟು ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ ಸಹಿ ಮಾಡಿ ದಿನಾಂಕಃ 03** ನೇ ಜುಲೈ**-2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)**

(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

**ಃ ಅನುಬಂಧ ಃ**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿಕೊಂಡ ಸಾಕ್ಷಿದಾರರ ವಿವರಃ-**

ಪ್ರಾಸಾ-1 : ಬಸಲಿಂಗಮ್ಮ.

ಪ್ರಾಸಾ-2 : ಲಕ್ಷ್ಮಣ.

**2. ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ವಿವರಃ-**

ನಿಪಿ-1 : ದೂರು.
ನಿಪಿ-1(ಎ) : ಪ್ರಾಸಾ-1 ರವರ ಸಹಿ.
ನಿಪಿ-2 : ಪಂಚನಾಮೆ.

ನಿಪಿ-2(ಎ) : ಪ್ರಾಸಾ-1 ರವರ ಸಹಿ.
ನಿಪಿ-3 : ಛಾಯಚಿತ್ರ.
ನಿಪಿ-4 ಮತ್ತು 5 : ಸಾಕ್ಷಿ ಅಲ್ಲಗಳೇದ ಹೇಳಿಕೆ.

**3. ಆರೋಪಿತರ ಪರ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ ಃ-**

ಇಲ್ಲಾ

**4. ಆರೋಪಿತರ ಪರ ಗುರುತಿಸಿಕೊಂಡ ದಾಖಲೆಗಳ ವಿವರ ಃ-**

ಇಲ್ಲಾ

**5. ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲಿನ ವಿವರ ಃ-**

ಇಲ್ಲಾ

(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

Digitally signed by RAFEEQ AHMED M
Location: Civil Judge and JMFC,Devadurga